ನಾಟ್ ಕೆ.ಎಸ್.ಟಿ.ಡಿ.ಸಿ. ಆದುದರಿಂದ ಈಗಿರತಕ್ಕ ಈ ಒಂದು ಗೃಹವನ್ನು ರಿಪೇರಿ ಮಾಡಲಿಕ್ಕೆ ಈ ವರ್ಷದಲ್ಲಿ ಒಂದು ಲಕ್ಷದ ಐವತ್ತೈದು ಸಾವಿರವನ್ನು ನಾವು ಮೀಸಲಿರಿಸಿದ್ದೇವೆ. ಇದನ್ನು ರಿಪೇರಿ ಮಾಡಿದರೆ ನಾವು ಒಳ್ಳೆಯ ಸೌಲಭ್ಯವನ್ನು ಕೊಡುವುದಕ್ಕೆ ಆಗುತ್ತದೆ. ಹಾಗಾಗಿ ನಾವು ಕೆ.ಎಸ್.ಟಿ.ಡಿ.ಸಿ. ಮತಿಯಿಂದ ಯಾವುದೇ ಹೋಟೆಲ್‌ನ್ನು ಹೊಸದಾಗಿ ಕಟ್ಟತಕ್ಕಂಥ ಒಂದು ಪ್ರಸಂಗ ಅಲ್ಲಿ ಬರುವುದಿಲ್ಲ. ಟೂರಿಸಂನಲ್ಲಿರತಕ್ಕಂಥದ್ದನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ ಐಹೊಳಿ ಬಿಜಾಪುರದಿಂದ ಬಹಳ ಹತ್ತಿರವಿದೆ. ಆದರೆ ಅಲ್ಲಿ ಒಂದು ಏರ್‌ಪೋರ್ಟ್ ಕೂಡ ಇಲ್ಲ. ಕೇಂದ್ರ ಸರ್ಕಾರದವರಲ್ಲಿ ಹೇಳಿಕೊಂಡು ಅಲ್ಲಿಗೆ ಒಂದು ವಾಯುದೂತ್ ಏರ್‌ಸ್ಟ್ರಿಪ್ಸ್‌ನ ಸೌಲಭ್ಯವನ್ನು ಒದಗಿಸಿದರೆ ಬಹಳಷ್ಟು ಫಾರಿನ್ ಟೂರಿಸ್ಟ್‌ಗಳಿಗೆ ಅನುಕೂಲವಾಗುತ್ತದೆ. ಮತ್ತು ಅಲ್ಲಿ ಗೈಡ್ಸ್ ಕೂಡ ಸಿಕ್ಕುವುದಿಲ್ಲ. ಬಿಜಾಪುರಕ್ಕೆ ಹೋಗಲಿ, ಐಹೊಳಿ, ಬಾದಾಮಿ, ಪಟ್ಟದಕಲ್ಲು ಎಲ್ಲಿಗೇ ಹೋಗಲಿ ಗೈಡ್ಸ್ ಸಿಕ್ಕುವುದಿಲ್ಲ. ಅಲ್ಲಿರುವ ಸುಮಾರು 70 ದೇವಸ್ಥಾನಗಳನ್ನು ನೋಡಬೇಕೆಂದರೆ 2-3 ದಿವಸ ಹಿಡಿಯುತ್ತದೆ. ತಾವು ಗೈಡ್‌ಗಳನ್ನು ಪ್ರೊವೈಡ್ ಮಾಡುವುದಿಲ್ಲ. ತಮ್ಮ ಟೂರಿಸ್ಟ್ ಡಿಪಾರ್ಟ್‌ಮೆಂಟ್‌ನವರ ಗೈಡ್‌ಗಳು ಸಹ ಅಲ್ಲಿ ಇಲ್ಲವೆಂದರೆ ಏನು ಅರ್ಥ? ಆದ್ದರಿಂದ ಇದರ ಬಗ್ಗೆ ಏನಾದರೂ ಚಿಂತನೆ ಮಾಡಿ ಗೈಡ್‌ಗಳ ಸೇವೆಯನ್ನು ಅಲ್ಲಿಗೆ ಒದಗಿಸುವ ಬಗ್ಗೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ. ಶಿವಮೂರ್ತಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಬಹುಶಃ ಮಾನ್ಯ ಪೆರಿಕಲ್ ಮಲ್ಲಪ್ಪನವರು ಅಲ್ಲಿ ಹೋಗಿದ್ದಾರೆ. ಅಲ್ಲಿಗೆ ಸರಿಯಾದ ಮಾಹಿತಿ ಇರತಕ್ಕಂಥ ಗೈಡ್‌ಗಳನ್ನು ನಾವು ನೇಮಕ ಮಾಡಿಲ್ಲ. ಈಗಾಗಲೇ ಆದರ ಬಗ್ಗೆ ಒಂದು ಕೋರ್ಸ್ ಸ್ಟಾರ್ಟ್ ಮಾಡಿ ಇಲಾಖೆಯಿಂದ ಎಲ್ಲೆಲ್ಲಿ ಐತಿಹಾಸಿಕ ಪ್ರೇಕ್ಷಣೀಯ ಸ್ಥಳಗಳಿವೆ. ಅದರ ಒಂದು ಹಿನ್ನಲೆಯಲ್ಲಿ ಗೊತ್ತು ಮಾಡಿಸಿಸಬೇಕೆಂದು ಅವರಿಗೆ ಟ್ರೈನಿಂಗ್ ಕೊಡುತ್ತಿದ್ದೇವೆ. ಟ್ರೈನಿಂಗ್ ಕೊಟ್ಟು ಅಲ್ಲಿ ಗೈಡ್‌ಗಳನ್ನು ನೇಮಿಸತಕ್ಕಂಥ ಒಂದು ತೀರ್ಮಾನ ನಾವು ಮಾಡುತ್ತೇವೆ. ತಾವು ಎರಡನೆಯದಾಗಿ ಕೇಳಿದಿರಿ, ವಾಯುದೂತ್ ಏರ್‌ಸ್ಟ್ರಿಪ್ಸ್ ಹಾಕಬೇಕೆಂಬುದರ ಬಗ್ಗೆ. ಹಾಗಾಗಿ ಫಾರಿನ್ ಟೂರಿಸ್ಟ್ ಬಯಸತಕ್ಕಂಥದ್ದೇನೆಂದರೆ ಅವರಿಗೆ ಈ ರೀತಿ ಒಂದು ಏರ್ ಸರ್ವೀಸ್ ಇದ್ದರೆ ಅವರು ನೋಡತಕ್ಕಂಥ ಜಾಗಕ್ಕೆ ಬರಲು ಅಪೇಕ್ಷೆ ಪಡುತ್ತಾರೆ.ಆದರೆ ನಮ್ಮ ಸರ್ಕಾರ ಅದಕ್ಕೆ ಹಣಕಾಸಿನ ಪ್ರಾವಿಷನ್ ಮಾಡಿಕೊಂಡಿಲ್ಲ. ಆದರೆ Overseas Economic Cooperation fund ಎಂದು ಹೇಳಿ ಜಪಾನೀಸ್ ಸರ್ಕಾರದವರು ಕೊಡತಕ್ಕಂಥ ಸಹಾಯದಲ್ಲಿ ಇದನ್ನು ಈ ರೀತಿ ಎಲ್ಲಲ್ಲಿ ಪ್ರೇಕ್ಷಣೀಯ ಸ್ಥಳಗಳಿವೆ ಅಲ್ಲಿ ಏರ್‌ಸ್ಟ್ರಿಪ್ಸ್ ಕೊಡಬೇಕೆಂದು ಹೇಳುವಂಥ ಶಿಫಾರಸ್ಸಿನ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ.

ಪ್ರಶ್ನೆ ಸಂಖ್ಯೆ : 3065 ಶ್ರೀ ವಸಂತ ವಿ. ಸಾಲಿಯಾನ.

ಉಪಾಧ್ಯಕ್ಷಿಣಿಯವರು : ಇದನ್ನು ಡಿ.ಪಿ.ಎ.ಆರ್.ಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಇನ್ನೊಂದು ದಿವಸ ಉತ್ತರ ಕೊಡುತ್ತಾರೆ.

ಬೆಳಗಾಂ ತಾಲ್ಲೂಕಿನ ಕಣಬರ್ಗಿ, ರಾಮತೀರ್ಥ ಮತ್ತು ಯಲ್ಲೂರಿನ ರಾಜಹಂಸಘಡದ ಪ್ರೇಕ್ಷಣೀಯ ಸ್ಥಳ ಅಭಿವೃದ್ಧಿ ಬಗ್ಗೆ.

3064- ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಬೆಳಗಾಂ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನ ಕಣಬರ್ಗಿ, ರಾಮತೀರ್ಥ ಮತ್ತು ಯಲ್ಲೂರಿನ ರಾಜಹಂಸಘಡದ ಪ್ರೇಕ್ಷಣೀಯ ಸ್ಥಳಗಳಾಗಿರುವುದು ನಿಜವೇ?

ಆ) ರಾಮತೀರ್ಥ ಮತ್ತು ರಾಜಹಂಸಘಡವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ?

ಇ) ಇಲ್ಲದಿದ್ದರೆ ಈ ಸ್ಥಳಗಳನ್ನು ಪ್ರೇಕ್ಷಣೀಯ ಸ್ಥಳಗಳೆಂದು ಘೋಷಿಸಲು ಹಾಗೂ ಪ್ರಸ್ತುತ ವರ್ಷದಲ್ಲಿ ಇವುಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) ಹೌದು.

ಆ) ಇಲ್ಲ.

ಇ) ಪ್ರೇಕ್ಷಣೀಯ ಸ್ಥಳಗಳ ಪಟ್ಟಿಯಲ್ಲಿ ಈ ಸ್ಥಳಗಳನ್ನು ಗುರುತಿಸಲು ಸರ್ಕಾರ ಕ್ರಮ ಕೈಗೊಳ್ಳುವುದು. ಪ್ರಸ್ತುತ ವರ್ಷದಲ್ಲಿ ಹಣಕಾಸಿನ ಕೊರತೆಯಿಂದಾಗಿ ಈ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತಿಲ್ಲ.

Sri. K.C. MODGEKAR DESAI : I have not received any reply.

(A copy of the reply was supplied to the Hon.Member)

Sri. K.C. MODGEKAR DESAI : Madam, Deputy Speaker, I have asked whether the Government has taken any action to develop " Ramthirth" and "Rajahansgadh" as tourist places? The Hon'ble Minister has given me th e reply saying 'No'. It is very surprising. Ramthirth- Kanabaragi is only 5 KMs away from Belgaum City and especially devotees are very much attracted to that place. Ramathith is located beneath the mountains and natural forest. From the mountain water flows down at the foot of Ramthirth throughout the year. Therefore, the government should consider this as a tourist place. As regards, the government should consider this as a tourist place. As regards, Rajhansgadh, Yellur, it is a historical place and it is located at a height of 500 to 600 ft. above the sea-level. To encourage the younger generation, all organisations conduct different types of competitions there like climbing up the mountain etc., The Government should consider all these facts and include these places in the comprehensive list of places of tourist interest and declare them as tourist places.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಉಪಾಧ್ಯಕ್ಷಣೆಯವರೆ, ಇವರೇನು ರಾಮತೀರ್ಥ ಮತ್ತೆ ರಾಜಹನ್ಸ್‌ಗಡ ಬಗ್ಗೆ ಹೇಳುತ್ತಿದ್ದಾರೆ, ಇವು ಬೆಳಗಾಂ ಜಿಲ್ಲೆಯಲ್ಲಿ 10 ಕಿಲೋಮೀಟರ್ ದೂರದಲ್ಲಿ ಇರತಕ್ಕಂಥ ಒಂದು ಪ್ರವಾಸಿ ಜಾಗ. ಈ ಸಾರಿ ನಾವು ಇದನ್ನು ಪ್ರವಾಸಿ ಪಟ್ಟಿಯಲ್ಲಿ ಸೇರಿಸಲಿಕ್ಕೆ ಸರ್ಕಾರ ತೀರ್ಮಾನ ಮಾಡಿದೆ.ಇದನ್ನು ಪ್ರೇಕ್ಷಣೀಯ ಸ್ಥಳ ಎಂದು ಈ ಸಾರಿ ನಾವು ಪಟ್ಟಿಯಲ್ಲಿ ಸೇರಿಸಿ ಘೋಷಿಸುತ್ತೇವೆ. ಹಾಗೆಯೇ ಈ ಸಲ ಫೆಸಿಲಿಟೀಸ್ ಕೊಡುವುದರಲ್ಲಿ, ನಮ್ಮ ಹಣದ ಅವೇಲಬಿಲಿಟಿ ನೋಡಿಕೊಂಡು ಡೆವಲಪ್ ಮಾಡಬೇಕಾಗುತ್ತದೆ. ಈ ವರ್ಷದಲ್ಲಿ ನಾವು ಹಣವನ್ನು

ಅದಕ್ಕೋಸ್ಕರ ಇಟ್ಟಿಲ್ಲ. ಮುಂದಿನ ವರ್ಷದಿಂದ ಇವುಗಳನ್ನು ಡೆವಲಪ್‌ಮೆಂಟ್ ಮಾಡಲಿಕ್ಕೆ ಎಷ್ಟು ಹಣಕಾಸು ಇಡಲಿಕ್ಕೆ ಸಾಧ್ಯವೋ ಅಷ್ಟನ್ನು ಮಾಡುತ್ತೇನೆ.

Sri. K.C. MODEKAR DESAI : The Hon'ble Minister has given me the reply. I think, it is a step-motherly treatment to Belgaum district. Therefore, the Hon'ble Minister should consider to include these places of tourists interest in this financial year itself.

ಶ್ರೀ ಕೆ. ಶಿವಮೂರ್ತಿ : ಈ ಟೂರಿಸ್ಟ್ ಪಾಯಿಂಟ್ ವ್ಯೂನಿಂದ ಯಾವುದನ್ನೂ ಸ್ಟೆಪ್ ಮದರ್‌ಲಿ ಟ್ರೀಟ್‌ಮೆಂಟ್ ಮಾಡಲಿಕ್ಕೆ ಸಾಧ್ಯವಿಲ್ಲ. ಎಲ್ಲಿ ಐತಿಹಾಸಿಕವಾಗಿ ಮತ್ತು ಪ್ರವಾಸಿಗರುಗಳಿಗೆ ಆಕರ್ಷಣೀಯವಾದಂಥ ಜಾಗ ಇದೆಯೇ ಯಾತ್ರಾ ಸ್ಥಳ ಇದೆಯೋ ಅದನ್ನು ಖಂಡಿತವಾಗಿ ಸರ್ಕಾರ ಗುರುತಿಸುತ್ತದೆ. ಆದರೆ ಡೆವಲಪ್‌ಮೆಂಟ್ ಮಾಡಲಿಕ್ಕೆ ಈ ವರ್ಷದಲ್ಲಿ We have not made a provision. Next year we will try to provide some finances to develop the area.

ಶ್ರೀ ಎಸ್.ಹೆಚ್. ಕೌಜಲಗಿ : ಬೆಳಗಾಂ ಜಿಲ್ಲೆಯಲ್ಲಿ ಟೂರಿಸಮ್ ಇಲಾಖೆಯಿಂದ ತೆಗೆದುಕೊಂಡ ಕೆಲಸಗಳು ಅರ್ಧಕ್ಕೆ ನಿಂತಿವೆ. ಆ ಕೆಲಸಗಳನ್ನು ತಾವು ಕೂಡಲೇ ಮುಗಿಸುತ್ತೀರಾ? ಈಗಾಗಲೇ ಯಾವುದಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿದ್ದಾರೆ. ಅವು ಕೂಡ ಇನ್ನೂ ಪ್ರಾರಂಭವಾಗಿರುವುದಿಲ್ಲ. ತಮಗೆ ಉದಾಹರಣೆ ಹೇಳಬೇಕೆಂದರೆ, ಶಿಕ್ಷಕರ ಶಿಬಿರದಲ್ಲಿ ಕಾಂಪೌಂಡ್ ವಾಲ್ ಸಲುವಾಗಿ ಕೆಲವೊಂದು ಕೆಲಸಗಳು ಅರ್ಧ ಆಗಿವೆ. ಅರ್ಧ ಆಗಿರತಕ್ಕಂಥ ಕೆಲಸಗಳು ಬಜೆಟ್ಟಿನಲ್ಲಿವೆ. ಬಜೆಟ್ಟಿನಲ್ಲಿರತಕ್ಕ ಹಣವನ್ನು ಉಪಯೋಗಿಸಿ ಈ ವರ್ಷ ಬೆಳಗಾಂನಲ್ಲಿ ಕೆಲಸ ಪ್ರಾರಂಭ ಮಾಡುತ್ತೀರಾ?

ಶ್ರೀ ಕೆ. ಶಿವಮೂರ್ತಿ : ಮಾನ್ಯ ಕೌಜಲಗಿಯವರು, ಶ್ರೀಮಾನ್ ಚಂದ್ರೇಗೌಡರಿಂದ ಪತ್ರವನ್ನು ಕೂಡ ಬರೆಸಿದ್ದಾರೆ. ಎಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡು ಅಪೂರ್ಣವಾಗಿವೆ ಅವುಗಳನ್ನು ಪೂರ್ಣಗೊಳಿಸಲಿಕ್ಕೆ ಹೇಳಿದ್ದಾರೆ. ನಾನು ತಕ್ಷಣ ನಮ್ಮ ಇಲಾಖೆಯ ಮುಖ್ಯಸ್ಥರನ್ನು ಅಧಿಕಾರಿಗಳನ್ನು ಕರೆದು, ಕೇಳಿದಾಗ ಇಲ್ಲ ಸಾರ್, ಯಾವುದನ್ನೂ ಆ ರೀತಿಯಾಗಿ ನಿಲ್ಲಿಸಿಲ್ಲ ಎಂದು ಹೇಳತಕ್ಕಂಥ ಉತ್ತರ ಅವರುಗಳಿಂದ ಕೇಳಿದೆ. ಆದ್ದರಿಂದ ಈ ಸಭೆ ಮುಗಿದ ನಂತರ ನಾನು ನಮ್ಮ ಸೆಕ್ರಟರಿ ಮತ್ತು ಡೈರೆಕ್ಟರ್‌ನ್ನು ಕರೆದು ಖುದ್ದಾಗಿ ತಿಳಿಸಿ, ಯಾವ್ಯಾವ ಕೆಲಸ ಪೆಂಡಿಂಗ್ ಇದೆ, ಅದನ್ನು ಕೇಳಿ, ಮಾನ್ಯ ಸದಸ್ಯರು ಹೇಳಿದ, ಪ್ರಕಾರ ಆ ಕೆಲಸಗಳನ್ನು ಪೂರ್ಣಗೊಳಿಸಲಿಕ್ಕೆ ಹೇಳುತ್ತೇನೆ.

Sri. S.H. Koujalagi : The administrative approval has been given by the government, but the work has not been started.

ತಾವು ಫೈಲ್ ತರಿಸಿ ನೋಡಿ, ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡದೇ ಇದ್ದರೆ ಆಗ ನಮಗೆ ಹೇಳಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ : ಅಧ್ಯಕ್ಷರೆ, ಮಾನ್ಯ ಸದಸ್ಯರು ಇವೊತ್ತು ಸಾಯಂಕಾಲ ನನ್ನ ಕಡೆಗೆ ಬರಲಿ. ನಾನು ಅಧಿಕಾರಿಗಳಿಗೂ ಕರೆಸುತ್ತೇನೆ, ಯಾವುದು ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟು ನಿಂತು ಹೋಗಿರತಕ್ಕ ಕೆಲಸ ಇದೆ ಅದರ ಬಗ್ಗೆ ವಿಚಾರಿಸಿ ಸರಿಯಾದ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.